JULY 06, 2026

AKASHAVANI - DHARWAD

PRADESH SAMACHARA (KANNADA) 07.05 A.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

<><><>

ಮುಖ್ಯಾಂಶಗಳು

<><><>

- ಕೊಪ್ಪಳ ಜಿಲ್ಲೆ, ಹಿರೇಬೆಣಕಲ್ಲಿನ, ಮೋರ್ಯಾರ ಆವಾಸಸ್ಥಾನ ಅಭಿವೃದ್ಧಿಗೆ, ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ, 80 ಲಕ್ಷ ರೂಪಾಯಿ ಅನುದಾನ.
- ರಾಜ್ಯದ ಎಲ್ಲ ಸರ್ಕಾರಿ ಕಚೇರಿಗಳಲ್ಲಿ, ವಿದ್ಯುತ್ ಮತ್ತು ನೀರಿನ ಮಿತವ್ಯಯಕ್ಕೆ, ಆಡಳಿತ ಸುಧಾರಣಾ ಇಲಾಖೆ, ಒತ್ತು.
- ಮಾದಕ ದ್ರವ್ಯ ವ್ಯಸನ ಮುಕ್ತತೆ ಜಾಗೃತಿ ಕಾರ್ಯಾಗಾರ; ಕಲಬುರಗಿಯಲ್ಲಿ ಸಂಪನ್ನ.
- ಇಂದು, ವಿಶ್ವ ಪ್ರಾಣಿಜನ್ಯ ರೋಗಗಳ, ಜನ ಜಾಗೃತಿ ದಿನಾಚರಣೆ.

<><><>

ಈಗ ವಾರ್ತೆಗಳ ವಿವರ

<><><>

ಕೊಪ್ಪಳ ಜಿಲ್ಲೆ ಗಂಗಾವತಿ ತಾಲೂಕು, ಹಿರೇಬೆಣಕಲ್ಲಿನ, ಆದಿಮಾನವ ಮೋರ್ಯಾರ ಆವಾಸಸ್ಥಾನದ ಬೆಟ್ಟಗಳು, ಬೃಹತ್ ಶಿಲಾಯುಗದ ನೆಲೆಯಾಗಿದ್ದು, ಯುನೆಸ್ಕೋ ವಿಶ್ವ ಪಾರಂಪರಿಕ ತಾಣಗಳ ಪಟ್ಟಿಯಲ್ಲಿ, ತಾತ್ಕಾಲಿಕ ಸ್ಥಾನ ಪಡೆದಿವೆ. 'ಕುಬ್ಬರ ಬೆಟ್ಟ' ಎಂದು ಕರೆಯಲಾಗುವ, 7 ಬೆಟ್ಟಗಳಲ್ಲಿನ ಸಮಾಧಿ, ವರ್ಣಚಿತ್ರಗಳ ಸಂರಕ್ಷಣೆ ಮತ್ತು ಮೂಲ ಸೌಕರ್ಯಗಳ ಅಭಿವೃದ್ಧಿಗೆ, ವಿಶೇ ಒತ್ತು ನೀಡಲಾಗುವುದು ಎಂದು, ಕೊಪ್ಪಳ ಜಿಲ್ಲೆ, ಉಸ್ತುವಾರಿ ಕಾರ್ಯದರ್ಶಿ, ಕೆ.ಪಿ. ಮೋಹನರಾಜ್ ಆಕಾಶವಾಣಿಗೆ ತಿಳಿಸಿದ್ದಾರೆ.

<><><>

ಈ ಕುರಿತು, ಒಂದು ವರದಿ...

<><><>

*ಹಿರೇಬೆಣಕಲ್ ಗ್ರಾಮದ ಮೋರ್ಯಾರ ಬೆಟ್ಟಗಳಲ್ಲಿ, ಅರಣ್ಯ ಇಲಾಖೆ, ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಶೀಘ್ರ ಕೈಗೆತ್ತಿಕೊಳ್ಳಲಿದೆ. ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ, ಮ್ಯಾಕ್ರೋ ಅನುದಾನದಡಿ 80 ಲಕ್ಷ ರೂಪಾಯಿ ಅನುದಾನ ಲಭ್ಯವಾಗಿದೆ. ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ. ಮೋರ್ಯಾರ ಬೆಟ್ಟ ಸ್ಮಾರಕಗಳ ರಕ್ಷಣೆಗೆ, ಎಲ್ಲ ರೀತಿಯ ಪ್ರಯತ್ನ ಜಿಲ್ಲಾಡಳಿತ ಕೈಗೊಳ್ಳಲಿದೆ, ಎಂದು, ಕೊಪ್ಪಳ ಜಿಲ್ಲಾಧಿಕಾರಿ, ಡಾಕ್ಟರ್ ಸುರೇಶ ಇಟ್ನಾಳ ಮಾಹಿತಿ ನೀಡಿದ್ದಾರೆ. ಹಿರೇಬೆಣಕಲ್ ಮೋರ್ಯಾರ ಬೆಟ್ಟದಲ್ಲಿ, ಪುರಾತತ್ವ*

*ಸರ್ವೇಕ್ಷಣಾ ಇಲಾಖೆಯ ಮೂವರು ರಕ್ಷಕರು ಕಾರ್ಯನಿರ್ವಹಿಸುತ್ತಿದ್ದು, ಸ್ಮಾರಕ ಮಿತ್ರರ ನೇಮಕ ಹಾಗೂ ರಾತ್ರಿ ವೇಳೆ ಗಸ್ತು ನಿರ್ವಹಿಸಲಾಗುವುದು ಎಂದು, ಪ್ರವಾಸೋದ್ಯಮ ಇಲಾಖೆ, ಪ್ರಭಾರಿ ಸಹಾಯಕ ನಿರ್ದೇಶಕ, ವಿಠ್ಠಲ ಜಾಬಗೌಡರ, ತಿಳಿಸಿದ್ದಾರೆ. ಮೋರ್ಯರ್‌ರ ಗುಡ್ಡದ ಮಹತ್ವ ಹಾಗೂ ವಿಶೇಷತೆ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಇತಿಹಾಸ ಸಂಶೋಧಕ ಹಾಗೂ ಕೆ.ಎಸ್.ಸಿ.ಎ. ಮಹಿಳಾ ಮಹಾವಿದ್ಯಾಲಯದ ಪ್ರಾಚಾರ್ಯ, ಗಂಗಾವತಿಯ ಡಾಕ್ಟರ್ ಶರಣಬಸಪ್ಪ ಕೋಲ್ಕಾರ.*

<><><>

ವಿವೇಕ (60) + ಡಾ. ಶರಣಬಸಪ್ಪ ಕೋಲ್ಕಾರ ಧ್ವನಿ (60) ಸೆಕೆಂದುಗಳು

<><><>

ಬೆಂಗಳೂರಿನ ವಿಧಾನಸೌಧ ಸೇರಿದಂತೆ, ರಾಜ್ಯದ ಎಲ್ಲ ಸರ್ಕಾರಿ ಕಚೇರಿಗಳಲ್ಲಿ, ವಿದ್ಯುತ್ ಮತ್ತು ನೀರಿನ ಮಿತವ್ಯಯ ಹಾಗೂ ಸಂರಕ್ಷಣೆಗೆ, ಆದ್ಯತೆ ನೀಡಲಾಗಿದೆ ಎಂದು, ಆಡಳಿತ ಮತ್ತು ಸಿಬ್ಬಂದಿ ಸುಧಾರಣಾ ಇಲಾಖೆ, ತಿಳಿಸಿದೆ. ವಿದ್ಯುತ್ ಹಿತಮಿತ ಬಳಕೆಗೆ, ವಿಧಾನಸೌಧದ ಆವರಣದಲ್ಲಿ, ಸೂರ್ಯೋದಯ ಮತ್ತು ಸೂರ್ಯಾಸ್ತಕ್ಕೆ ಅನುಗುಣವಾಗಿ, ಸ್ವಯಂಚಾಲಿತ ಆನ್/ಆಫ್ ವ್ಯವಸ್ಥೆ ಮಾಡಲಾಗಿದೆ. ಎಲ್ಲ ಹವಾನಿಯಂತ್ರಕಗಳನ್ನು, 24 ರಿಂದ 26 ಡಿಗ್ರಿ ಸೆಲ್ಸಿಯಸ್ ತಾಪಮಾನದಲ್ಲಿಯೇ ಬಳಸುವಂತೆ, ಕಟ್ಟುನಿಟ್ಟಿನ ನಿರ್ದೇಶನ ನೀಡಲಾಗಿದೆ. ನೀರಿನ ಸಂರಕ್ಷಣೆಯ ದೃಷ್ಟಿಯಿಂದ, ಮೇಲ್ಮಟ್ಟದ ನೀರಿನ ಟ್ಯಾಂಕ್‌ಗಳಿಂದ ನೀರು ವ್ಯರ್ಥವಾಗಿ ಹರಿಯದಂತೆ ತಡೆಯಲು, 'ಬಾಲ್ ವಾಲ್ವ್' ಗಳನ್ನು ಅಳವಡಿಸಲಾಗಿದೆ. ವಿಧಾನಸೌಧದ ಉದ್ಯಾನಗಳ ನಿರ್ವಹಣೆಗೆ, ಕೇವಲ ಸಂಸ್ಕರಿಸಿದ ತ್ಯಾಜ್ಯ ನೀರನ್ನು ಬಳಸಲಾಗುತ್ತಿದೆ. ಮಳೆ ನೀರು ಕೊಯ್ಲು ವ್ಯವಸ್ಥೆಯನ್ನು, ಇನ್ನ ್ಟ ಪರಿಣಾಮಕಾರಿಯಾಗಿ ಜಾರಿಗೊಳಿಸಲು, ಕ್ರಮ ಕೈಗೊಳ್ಳಲಾಗಿದೆ. ನೀರಿನ ಮಿತವ್ಯಯದ ಬಳಕೆ ಹಾಗೂ ಸೋರಿಕೆ ನಿಯಂತ್ರಣಕ್ಕಾಗಿ, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ತಾಂತ್ರಿಕ ಸಹಕಾರವನ್ನು ಪಡೆಯಲಾಗುತ್ತಿದೆ ಎಂದು, ತಿಳಿಸಲಾಗಿದೆ.

<><><>

15ನೇ ಕೇಂದ್ರ ಹಣಕಾಸು ಆಯೋಗದ, ಅನುದಾನದಡಿ, ಚಿಕ್ಕಬಳ್ಳಾಪುರ ಜಿಲ್ಲೆ, ಗೌರಿಬಿದನೂರು ತಾಲೂಕು, ಪೋತೇನಹಳ್ಳಿ, ವೇದಲವೇಣಿ, ಕದಿರೇನಹಳ್ಳಿ ಮತ್ತು ಜೀಲಾಕುಂಟೆಗೆ, ತಲಾ 65 ಲಕ್ಷ ರೂಪಾಯಿ ವೆಚ್ಚದಲ್ಲಿ, ಆಯು ್ಮನ್ ಭಾರತ ಆರೋಗ್ಯ ಕೇಂದ್ರಗಳನ್ನು ನಿರ್ಮಿಸಲಾಗುತ್ತಿದೆ. ನೂತನ ಕಟ್ಟಡ ನಿರ್ಮಾಣ ಕಾಮಗಾರಿಗಳಿಗೆ, ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದ ಸಂಸದ, ಡಾಕ್ಟರ್ ಕೆ.ಸುಧಾಕರ, ಇಂದು ಭೂಮಿಪೂಜೆ ನೆರವೇರಿಸಲಿದ್ದಾರೆ.

<><><>

ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..

(37 ಸೆಕೆಂದುಗಳು)

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ವಿಕಸಿತ ಭಾರತ, 2047ರ ಕನಸನ್ನು ನನಸು ಮಾಡಲು, ಮಾದಕ ದ್ರವ್ಯಗಳ ವ್ಯಸನದಿಂದ, ಯುವಜನತೆ ದೂರವಿರಬೇಕು; ಕಾನೂನಿನ ಅರಿವು ಹೊಂದಿ, ಜವಾಬ್ದಾರಿಯುತ ಪ್ರಜೆಗಳಾಗಬೇಕು ಎಂದು, ಕಲಬುರಗಿ ಜಿಲ್ಲೆ, ಪ್ರಧಾನ ನ್ಯಾಯಾಧೀಶ ಜಿ.ಎಲ್. ಲಕ್ಷ್ಮೀನಾರಾಯಣ, ಕರೆ ನೀಡಿದ್ದಾರೆ. ಶರಣಬಸವೇಶ್ವರ ವಿಶ್ವವಿದ್ಯಾಲಯದ, ಪೂಜ್ಯ ದೊಡ್ಡಪ್ಪ ಅಪ್ಪ ಸಭಾಂಗಣದಲ್ಲಿ, ಪೋಸ್ಕೋ

ಕಾಯ್ದೆ ಹಾಗೂ ಮಾದಕ ದ್ರವ್ಯ ವ್ಯಸನ ಮುಕ್ತತೆ ಜಾಗೃತಿ ಕಾರ್ಯಾಗಾರ ಉದ್ಘಾಟಿಸಿ, ಅವರು ಮಾತನಾಡಿದರು. ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ, ಸದಸ್ಯ ಕಾರ್ಯದರ್ಶಿ ಹಾಗೂ ಜಿಲ್ಲಾ ನ್ಯಾಯಾಧೀಶ ಶಶಿಧರ ಶೆಟ್ಟಿ ಮಾತನಾಡಿ, ಮಕ್ಕಳ ದೌರ್ಜನ್ಯ ಪ್ರಕರಣ ಕಂಡುಬಂದಲ್ಲಿ, ಮಕ್ಕಳ ಸಹಾಯವಾಣಿ 1–0–9–8ಕ್ಕೆ ಮತ್ತು, ಮಾದಕ ವಸ್ತುಗಳ ಸಾಗಣೆ ಅಥವಾ ಮಾರಾಟದ ಬಗ್ಗೆ, 1–9–3–3 ಸಹಾಯವಾಣಿಗೆ ಕರೆ ಮಾಡಿ, ಮಾಹಿತಿ ನೀಡುವಂತೆ, ಕೋರಿದರು.

<><><>

ಅಖಿಲ ಭಾರತ, ಗಂಧರ್ವ ಮಹಾವಿದ್ಯಾಲಯ ಆಯೋಜಿಸುವ, ವಿಶಾರದ ಪರೀಕ್ಷೆಯಲ್ಲಿ, ಧಾರವಾಡದ ಯುವ ತಬಲಾ ಪ್ರತಿಭೆ, ಅಥರ್ವ ರಾಘವೇಂದ್ರ ಘಂಟೆಣ್ಣವರ, ಅಖಿಲ ಭಾರತ ಮಟ್ಟದಲ್ಲಿ, ಪ್ರಥಮ ಸ್ಥಾನ ಗಳಿಸಿದ್ದಾರೆ. ಪ್ರಸ್ತುತ, ಧಾರವಾಡದ ಜನತಾ ಶಿಕ್ಷಣ ಸಮಿತಿಯ, ಆರ್.ಎಸ್.ಹುಕ್ಕೇರಿಕರ ಪಿ.ಯು. ಮಹಾವಿದ್ಯಾಲಯದ, ವಿಜ್ಞಾನ ವಿಭಾಗದಲ್ಲಿ, ದ್ವಿತೀಯ ವರ್ಷದ ವಿದ್ಯಾರ್ಥಿಯಾಗಿರುವ ಅಥರ್ವ, ಖ್ಯಾತ ತಬಲಾ ಪಟು, ಡಾಕ್ಟರ್ ಶ್ರೀಹರಿ ದಿಗ್ಗಾವಿ ಅವರಲ್ಲಿ, ತಬಲಾ ವ್ಯಾಸಂಗ ಮಾಡುತ್ತಿದ್ದಾರೆ. ಯುವ ಪ್ರತಿಭೆ, ಅಥರ್ವ ಘಂಟೆಣ್ಣವರ, ಪ್ರದೇಶ ಸಮಾಚಾರಕ್ಕಾಗಿ, ತಮ್ಮ ಸಂತಸ ಹಂಚಿಕೊಂಡಿದ್ದಾರೆ.

<><><>

ಅಥರ್ವ ಘಂಟೆನ್ನವರ ಧ್ವನಿ 45 ಸೆಕೆಂದುಗಳು

<><><>

ಪ್ರಾಣಿಗಳು ಮತ್ತು ಮನು ್ಯರ ಮಧ್ಯೆ ಹರಡುವ ರೋಗಗಳ ಬಗ್ಗೆ, ಜನ ಜಾಗೃತಿ ಮೂಡಿಸುವ, ವಿಶ್ವ ಪ್ರಾಣಿಜನ್ಯ ರೋಗ ದಿನಾಚರಣೆ ಇಂದು. "ಮೃಗಜನ್ಯ ರೋಗಗಳು ಹೆಚ್ಚಾಗುತ್ತಿವೆ; ಜವಾಬ್ದಾರಿ ಹಂಚಿಕೆ ಹಾಗೂ ಸ್ಥಳಾವಕಾಶ" ಎಂಬ, ಧ್ಯೇಯದೊಂದಿಗೆ, ವಿಶ್ವ ಪ್ರಾಣಿಜನ್ಯ ರೋಗ ದಿನವನ್ನು, ಜನ ಜಾಗೃತಿ ಜಾಥಾ ಹಾಗೂ ಕಾರ್ಯಕ್ರಮಗಳ ಮೂಲಕ, ವಿವಿಧೆಡೆ ಆಚರಿಸಲಾಗುತ್ತಿದೆ. ಈ ಆಚರಣೆ, ಜಾಗತಿಕ ಮಟ್ಟದಲ್ಲಿ, "ಒಂದೇ ಆರೋಗ್ಯ ವಿಧಾನ ಪಾಲನೆ" ಬಗ್ಗೆ, ಒತ್ತು ನಿಡುತ್ತದೆ. ಮಾನವ, ಪ್ರಾಣಿ ಮತ್ತು ಪರಿಸರ ಆರೋಗ್ಯ, ಮೂಲಭೂತವಾಗಿ ಪರಸ್ಪರ ಸಹಯೋಗದ ಸಂಬಂಧ ಹೊಂದಿವೆ ಎಂಬುದನ್ನು, ಎತ್ತಿ ತೋರಿಸುತ್ತದೆ. 1885ರ ಜುಲೈ 6 ರಂದು, ಫ್ರೆಂಚ್ ವಿಜ್ಞಾನಿ, ಲೂಯಿಸ್ ಪಾಶ್ಚರ್, ಓರ್ವ ಬಾಲಕನಿಗೆ, ಪ್ರಾಣಿಜನ್ಯ ರೋಗ ರೇಬೀಸ್ ವಿರುದ್ಧ, ಮೊದಲ ಲಸಿಕೆಯನ್ನು ಯಶಸ್ವಿಯಾಗಿ ನೀಡಿದ, ವಾರ್ಷಿಕೋತ್ಸವದ ಸ್ಮರಣೆ ದಿನ.

<><><>

ರಾಮನಗರ ಜಿಲ್ಲೆ, ಬಸನಪುರದ ಶ್ರೀ ರಾಮದೇವರ ಬೆಟ್ಟದ, ರಣಹದ್ದುಗಳ ವನ್ಯಜೀವಿ ಧಾಮದಲ್ಲಿ, ಏಕ್ ಪೇಡ್ ಮಾ ಕೇ ನಾಮ್ ಅಭಿಯಾನದಡಿ, ರಾಜ್ಯ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿ, ಎಸ್. ವಿಶ್ವಜಿತ ಶೆಟ್ಟಿ, ಸಸಿ ನೆಟ್ಟರು. ಬೆಂಗಳೂರು ದಕ್ಷಿಣ ಜಿಲ್ಲೆಯ, ಆಡಳಿತಾತ್ಮಕ ನ್ಯಾಯಮೂರ್ತಿಗಳಾದ ಎಸ್. ವಿಶ್ವಜಿತ ಶೆಟ್ಟಿ ಅವರು, ನಗರದ ಜಿಲ್ಲಾ ನ್ಯಾಯಾಲಯಕ್ಕೆ ಭೇಟಿ ನೀಡಿ, ಪರಿಶೀಲಿಸಿದರು. ಪ್ರಧಾನ ಜಿಲ್ಲಾ ನ್ಯಾಯಾಧೀಶ ಎಂ.ಎಚ್. ಅಣ್ಣಯ್ಯನವರ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ, ಪಿ.ಆರ್.ಸವಿತಾ, ವಲಯ ಅರಣ್ಯಾಧಿಕಾರಿ ಮಹಮ್ಮದ್ ಮನ್ಸೂರ ಸೇರಿದಂತೆ, ಅನೇಕ ಗಣ್ಯರು ಪಾಲ್ಗೊಂಡಿದ್ದರು.

<><><>

ಸಾಂಪ್ರದಾಯಿಕ ಕುಶಲಕರ್ಮಿಗಳ ಅಭಿವೃದ್ಧಿಗಾಗಿ, "ಪಿ.ಎಂ. ವಿಶ್ವಕರ್ಮ ಯೋಜನೆ" ಅನುಷ್ಟಾನಗೊಂಡಿದ್ದು, ಜಾಂಗೀಡ್ ಬ್ರಾಹ್ಮಣ ಸಮುದಾಯ, ಸದುಪಯೋಗ ಪಡೆದು, ಉದ್ಯಮಶೀಲರಾಗಬೇಕು ಎಂದು, ರಾಜ್ಯಪಾಲ ಥಾವರಚಂದ ಗೆಹ್ಲೋಟ, ಹೇಳಿದ್ದಾರೆ. ಬೆಂಗಳೂರಿನ ಅರಮನೆ ಮೈದಾನದಲ್ಲಿ, ಅಖಿಲ ಭಾರತ ಜಾಂಗೀಡ್ ಬ್ರಾಹ್ಮಣ ಮಹಾಸಭಾ ಆಯೋಜಿಸಿದ್ದ, ರಾಷ್ಟ್ರೀಯ ಸಾಮಾಜಿಕ ವಿಚಾರ ಸಂಕಿರಣ ಉದ್ಘಾಟಿಸಿ, ಅವರು ಮಾತನಾಡಿದರು. "ಬೇಟಿ ಬಚಾವೋ, ಬೇಟಿ ಪಢಾವೋ" ಯೋಜನೆ, ಸಮಾಜದಲ್ಲಿ, ಪರಿಣಾಮಕಾರಿಯಾಗಿ ಜಾರಿಗೊಂಡು, ಹೆಣ್ಣು ಮಗು ಸಬಲಗೊಳ್ಳಬೇಕು ಎಂದು, ರಾಜ್ಯಪಾಲರು ಆಶಿಸಿದರು. ಅಖಿಲ ಭಾರತ

ಜಾಂಗೀಡ್ ಬ್ರಾಹ್ಮಣ ಮಹಾಸಭಾದ ಮುಖ್ಯ ಪೋ ಕ, ಭನ್ವರ್‌ಲಾಲ್ ಕುಲ್ರಿಯಾ, ರಾಷ್ಟ್ರೀಯ ಅಧ್ಯಕ್ಷ ರಾಂಪಾಲ್ ಶರ್ಮಾ ಹಾಗೂ ವಿವಿಧ ರಾಜ್ಯಗಳಿಂದ ಆಗಮಿಸಿದ್ದ, ಮಹಾಸಭೆಯ ಪದಾಧಿಕಾರಿಗಳು, ಗಣ್ಯರು ಪಾಲ್ಗೊಂಡಿದ್ದರು.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು

<><><>

- ಕೊಪ್ಪಳ ಜಿಲ್ಲೆ, ಹಿರೇಬೆಣಕಲ್ಲಿನ, ಮೋರ್ಯರ ಆವಾಸಸ್ಥಾನ ಅಭಿವೃದ್ಧಿಗೆ, ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ, 80 ಲಕ್ಷ ರೂಪಾಯಿ ಅನುದಾನ.
- ರಾಜ್ಯದ ಎಲ್ಲ ಸರ್ಕಾರಿ ಕಚೇರಿಗಳಲ್ಲಿ, ವಿದ್ಯುತ್ ಮತ್ತು ನೀರಿನ ಮಿತವ್ಯಯಕ್ಕೆ, ಆಡಳಿತ ಸುಧಾರಣಾ ಇಲಾಖೆ, ಒತ್ತು.
- ಮಾದಕ ದ್ರವ್ಯ ವ್ಯಸನ ಮುಕ್ತತೆ ಜಾಗೃತಿ ಕಾರ್ಯಾಗಾರ; ಕಲಬುರಗಿಯಲ್ಲಿ ಸಂಪನ್ನ.
- ಇಂದು, ವಿಶ್ವ ಪ್ರಾಣಿಜನ್ಯ ರೋಗಗಳ, ಜನ ಜಾಗೃತಿ ದಿನಾಚರಣೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>